

# ತನ್ನಂತೆ ಪರರ ಬಗೆದೊಡೆ

■ ಲಕ್ಷ್ಮಣ್ ಗೊರ್ಲಕಟ್ಟೆ
ಕಲೆ: ಸಂತೋಷ್ ಸಸಿಹಿತ್ಲು

ರಾಮಪುರ ಒಂದು ಪುಟ್ಟ ಹಳ್ಳಿ, ಅದರಲ್ಲಿ ರಾಮಣ್ಣ ಹೆಸರಿನ ಒಬ್ಬ ವ್ಯಕ್ತಿಯ ವಾಸ. ರಾಮಣ್ಣ ಎಲ್ಲರನ್ನೂ ಸಂಶಯದಿಂದ ನೋಡುವ ಮನಸ್ಸು. ಯಾರೊಂದಿಗೂ ಒಳ್ಳೆಯ ಮಾತಿಲ್ಲ, ಒಡನಾಟ ಇಲ್ಲ. ಹಳ್ಳಿಯ ಬೀದಿ ಬೀದಿಯಲ್ಲಿ ನಡೆದಾಡುವಾಗ ದಾರಿಯಲ್ಲಿ ಸಿಕ್ಕವರನ್ನೆಲ್ಲ ಅನುಮಾನದಿಂದ ನೋಡುತ್ತಿದ್ದ. ಇದರಿಂದ ಯಾರೂ ರಾಮಣ್ಣನನ್ನು ಮಾತನಾಡಿಸುತ್ತಿರಲಿಲ್ಲ. ಅವನ ಕಡೆಗೆ ತಿರುಗಿ ನೋಡುತ್ತಿರಲಿಲ್ಲ. ಇದರಿಂದ ರಾಮಣ್ಣನಿಗೆ ಬೇಸರವಾಯಿತು. ನನ್ನನ್ನು ಕಂಡರೆ ಯಾರಿಗೂ ಇಷ್ಟವಿಲ್ಲ ಎಲ್ಲರೂ ನನ್ನನ್ನು ಅಸಡ್ಡೆ ಮಾಡುತ್ತಿದ್ದಾರೆ ಎಂದೇ ತಿಳಿದುಕೊಂಡ. ಬೇಸರದಿಂದ ಈ ಊರಿನ ಜನರ ಸಹವಾಸವೇ ಬೇಡ ಎಂದು ತೀರ್ಮಾನಿಸಿ, ಸ್ನೇಹಪರ ಜನರಿರುವ ಹಳ್ಳಿಗೆ ಹೋಗಿ ನೆಲೆಸೋಣ ಎಂದು ನಿಶ್ಚಯಿಸಿದ. ರಾಂಪುರ ಬಿಟ್ಟು ಹೊರಟು ಮತ್ತೊಂದು ಹಳ್ಳಿಗೆ ಬಂದ. ಆ ಹಳ್ಳಿಯಲ್ಲಿ ಒಂದು ಮರದ ನೆರಳಲ್ಲಿ ವಿಶ್ರಮಿಸುತ್ತಿದ್ದ ಒಬ್ಬ ವ್ಯಕ್ತಿಯನ್ನು ಕಂಡು 'ನಿಮ್ಮ ಹಳ್ಳಿಯಲ್ಲಿ ಯಾವ ತರಹದ ಜನರಿದ್ದಾರೆ?' ಎಂದು ವಿಚಾರಿಸಿದ.

ಆ ವ್ಯಕ್ತಿ 'ನಿಮ್ಮ ಹಳ್ಳಿಯಲ್ಲಿ ಯಾವ ರೀತಿಯ ಜನರಿದ್ದಾರೆ? ಇಲ್ಲಿಯೂ ಅದೇ ತರಹದ ಜನರಿದ್ದಾರೆ' ಎಂದ. ರಾಮಣ್ಣನಿಗೆ ನಿರಾಸೆ ಆಯಿತು. ಇಲ್ಲಿಯೂ ಅಂತಹ ಜನರೇ ಇದ್ದರೆ, ಈ ಹಳ್ಳಿ ಬೇಡ ಎಂದು ಅಲ್ಲಿಂದ ಹೊರಟು ಮತ್ತೊಂದು ಹಳ್ಳಿ ತಲುಪಿದ. ಅಲ್ಲಿಯೂ ಊರಿನ ಮುಂದೆ ಒಂದು ಮರ, ಅದರ ನೆರಳಲ್ಲಿ ಕುಳಿತ ಒಂದು ವ್ಯಕ್ತಿಯನ್ನು ಕಂಡ. ಮೊದಲಿನಂತೆಯೇ 'ನಿಮ್ಮ ಹಳ್ಳಿಯಲ್ಲಿ ಯಾವ ರೀತಿಯ ಜನ ವಾಸ ಮಾಡುತ್ತಿದ್ದಾರೆ' ಎಂದು ಪ್ರಶ್ನಿಸಿದ. ಮತ್ತೆ ಅದೇ ರೀತಿಯ ಉತ್ತರ ಬಂತು. 'ನಿಮ್ಮ ಹಳ್ಳಿಯಲ್ಲಿ ಯಾವ ರೀತಿಯ ಜನ ಇದ್ದಾರೆ? ನಮ್ಮಲ್ಲಿಯೂ ಅದೇ ರೀತಿ ಜನ ವಾಸ ಇದ್ದಾರೆ' ಎಂದು. ಈ ಹಳ್ಳಿಯೂ ನನಗೆ ಬೇಡ ಎಂದುಕೊಂಡ ರಾಮಣ್ಣ ಮತ್ತೊಂದು ಹಳ್ಳಿಗೆ ಹೋದ. ಅಲ್ಲಿಯೂ ಅವನಿಗೆ ಅದೇ ರೀತಿ ಉತ್ತರ ಬಂತು. ಹೀಗೆ ಒಂದು ಹಳ್ಳಿಯಿಂದ ಮತ್ತೊಂದು ಹಳ್ಳಿಗೆ ಅಲೆದಾಡಿದ. ಎಲ್ಲ ಕಡೆ ಅದೇ ನಿರಾಶಾದಾಯಕ ಉತ್ತರ ಬಂತು.

ರಾಮಣ್ಣನಿಗೆ ಈಗ ಮನಸ್ಸಿನಲ್ಲಿ ತಳಮಳ ಉಂಟಾಗಿ ಗಂಭೀರವಾಗಿ ಯೋಚಿಸತೊಡಗಿದ. ನನ್ನ ಹಳ್ಳಿಯ ಜನರನ್ನು ನಾನು ಹೇಗೆ ನಡೆಸಿಕೊಂಡಿದ್ದೆ? ನಾನು ಎಂದಾದರೂ ನಮ್ಮೂರ ಜನರಿಗೆ ಒಂದೊಳ್ಳೆಯ ಮಾತು ಆಡಿದ್ದೇನೆಯೇ? ಯಾರಿಗಾದರೂ ಮುಗುಳುನಗೆಯಿಂದ ನೋಡಿದ್ದೇನೆಯೇ? ಯಾರ ಮೇಲೂ ಸಂಶಯ ಪಡದೇ ವಿಶ್ವಾಸ ವ್ಯಕ್ತಪಡಿಸಿದ್ದೇನೆಯೇ? ಇವೆಲ್ಲದಕ್ಕೂ ರಾಮಣ್ಣನ ಮನಸ್ಸಿನಲ್ಲಿ ನಕಾರಾತ್ಮಕ ಉತ್ತರಗಳೇ ಆಗಿದ್ದವು. ನನ್ನ ನಕಾರಾತ್ಮಕ ವರ್ತನೆ ಮತ್ತು ಆಲೋಚನೆಗಳಿಂದ ತನ್ನ ಹಳ್ಳಿಯವರನ್ನು ನಾನು ವ್ಯರ್ಥವಾಗಿ ತಪ್ಪು ತಿಳಿದದ್ದು ಎಂದು ರಾಮಣ್ಣನಿಗೆ ಅರಿವಾಯಿತು. ಈ ಯೋಚನೆಯಿಂದ ರಾಮಣ್ಣ ಸಂಪೂರ್ಣವಾಗಿ ಬದಲಾಗಿ ತನ್ನ ಹಳ್ಳಿಗೆ ಹಿಂತಿರುಗಿ ಬಂದ. ತನ್ನ ಊರಿನಲ್ಲಿ ಎದುರಿಗೆ ಸಿಕ್ಕವರನ್ನು ಕಂಡು ಮುಗುಳು ನಕ್ಕ. ಪ್ರತಿಯಾಗಿ ಎಲ್ಲರೂ ಸಂತಸದಿಂದ ರಾಮಣ್ಣನ ಯೋಗಕ್ಷೇಮ ವಿಚಾರಿಸಿ, ಇಷ್ಟು ದಿನ ಎಲ್ಲಿದ್ದೆ? ಈಗ ವಾಪಸು ಬಂದಿದ್ದಕ್ಕೆ ಸಂತೋಷ ವ್ಯಕ್ತಪಡಿಸಿದರು. ಈಗ ರಾಮಣ್ಣ ಸಂಪೂರ್ಣ ಬದಲಾಗಿದ್ದ, ಅವನಿಗೆ ತನ್ನ ಹಳ್ಳಿಯವರೆಲ್ಲಾ ಒಳ್ಳೆಯವರೇ ಆಗಿ ಕಾಣಿಸತೊಡಗಿದರು!

'ತನ್ನಂತೆ ಪರರ ಬಗೆದೊಡೆ ಕೈಲಾಸ ಬಿನ್ನಾಣವಕ್ಕು' ■